(ಇಂದು ದಿನಾಂಕ 20-12-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಶ್ರೀ ಹೆಚ್.ಎಸ್.ಎಸ್. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**<u>ಪಾಟೀ ಸವಾಲುಃ ಆರೋಪಿ ಪರ ಪರಃ ಶ್ರೀಮತಿ ಎಸ್.ಎಸ್.ಕೆ. ವಕೀಲರಿಂದಃ</u>**

ನ್ಯಾಯಾಲಯದ ಮುಂದೆ ನಾನು ಸಲ್ಲಿಸಿರುವ ಖಾಸಗಿ ಫಿರ್ಯಾದಿಯನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ವ್ಯಾಪಾರ ಮಾಡುತ್ತೇನೆ. ಆರೋಪಿಯ ಸ್ನೇಹಿತೆ, ಆರೋಪಿ ಜಾಗೆಯನ್ನು ಮಾರಾಟ ಮಾಡುವುದಿದೆ ಎಂದು ಹೇಳಿದ್ದರ ಮೇರೆಗೆ ಆರೋಪಿಯ ಪರಿಚಯ ಆಗಿದೆ. ಆರೋಪಿಗೆ ನಾನು ರೂ. 6,50,000-00 ಹಣವನ್ನು ಕೊಟ್ಟಿದ್ದೇನೆ. ನಾನು ರೂ. 6,50,000-00 ಹಣವನ್ನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಆರೋಪಿ ನನಗೆ 2 ಚೆಕ್ಕನ್ನು ಕೊಟ್ಟಿದ್ದು ಇನ್ನೊಂದು ಚೆಕ್ಕನ್ನು ಆರೋಪಿಯ ಗಂಡ ಕೊಟ್ಟಿದ್ದಾರೆ. ಆರೋಪಿ ಒಂದು ಚೆಕ್ಕನ್ನು ರೂ. 5,00,000-00 ಗಳಿಗೆ ಇನ್ನೊಂದು ಚೆಕ್ಕನ್ನು ರೂ. 1,25,000-00 ಕ್ಕೆ ಕೊಟ್ಟಿದ್ದಾಳೆ. ಆರೋಪಿಯ ಗಂಡ ಕೊಟ್ಟಂತಹ ಚೆಕ್ಕ ರೂ. 1,25,000-00 ಇರಬಹುದು, ನನಗೆ ನೆನಪಿಲ್ಲ. ಈ ನ್ಯಾಯಾಲಯದಲ್ಲಿ ಅಲ್ಲದೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಚೆಕ್ಕಿಗೆ ಸಂಬಂಧಪಟ್ಟಂತೆ ನನ್ನ ಮತ್ತು ಆರೋಪಿಯ ಗಂಡನ ನಡುವೆ ಚೆಕ್ಕಿಗೆ ಸಂಬಂಧಪಟ್ಟಂತೆ ನಡೆಯುತ್ತಿತ್ತು ಎಂದರೆ ಸರಿ. ಸದರಿ ಕೇಸ್ ಲೋಕ ಅದಾಲತ್‌ನಲ್ಲಿ ರಾಜಿಯಾಗಿ ಮುಕ್ತಾಯಗೊಂಡಿದೆ ಎಂದರೆ ಸರಿ. ನಿ.ಪಿ.1 ರಲ್ಲಿ ಮತ್ತು ನಿ.ಪಿ.2 ರಲ್ಲಿ ಬರೆದಂತಹ ಕೈಬರಹಗಳು ಮತ್ತು ಶಾಯಿ (ಇಂಕ್) ಬಣ್ಣ ಬೇರೆ ಬೇರೆ ಇದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ, ಆರೋಪಿ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆರೋಪಿಗೆ ನಾನು ಯಾವುದೇ ಹಣವನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಾನು ಆರೋಪಿಗೆ ಹಣ ಕೊಡದೇ ಇರುವುದರಿಂದ ನನ್ನ ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಅನ್ನುವುದು

ಸರಿಯಲ್ಲ, ಸಾಕ್ಷಿ ಮುಂದುವರಿದು ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. ಆರೋಪಿಯ ಗಂಡ ಎಲ್ಲಾ ಹಣವನ್ನು ಮರುಪಾವತಿಸಿದ್ದರಿಂದ ನಾನು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಹಾಕಿದಂತಹ ಚೆಕ್ ಕೇಸನ್ನು ಮುಕ್ತಾಯಗೊಳಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಆರೋಪಿಯ ಗಂಡನಿಗೆ ಸಂಬಂಧಪಟ್ಟಂತಹ ಹಣಕ್ಕೆ ಸಂಬಂಧಪಟ್ಟಂತೆ ರಾಜಿ ಮಾಡಿಕೊಂಡಿದ್ದೇನೆ ಎಂದು ಹೇಳುತ್ತಾರೆ. ಆರೋಪಿ ನನ್ನ ಕಡೆಯಿಂದ ಹಣ ತೆಗೆದುಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಹಣ ಕೊಡಬೇಕಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ